# ಕರ್ನಾಟಕದಲ್ಲಿ ನಿರಾಶ್ರಿತ ಮಕ್ಕಳ ಸಬಲೀಕರಣ: ಒಂದು ರಾಜ್ಯಶಾಸ್ತ್ರೀಯ ಅಧ್ಯಯನ

ಶ್ರೀಮತಿ ಜ್ಯೋತಿ[1] & ಕೃಷ್ಣಪ್ಪ ಜಿ. ನಿಂಬಕ್ಕನವರ[2]

[1]ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

[2]ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

DOI: https://doi.org/10.5281/zenodo.18848813

## ABSTRACT:

ಈ ಸಂಶೋಧನಾ ಪ್ರಬಂಧವು ಕರ್ನಾಟಕದ ನಿರಾಶ್ರಿತ ಮಕ್ಕಳ ಸಬಲೀಕರಣವನ್ನು ರಾಜ್ಯಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ. ನಿರಾಶ್ರಿತ ಮಕ್ಕಳು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳ ಪರಿಣಾಮವಾಗಿ ಅಂಚಿನಲ್ಲಿರುವ ಸಮೂಹವಾಗಿದೆ. ಭಾರತದಲ್ಲಿ ಜುವೆನೈಲ್ ಜಸ್ಟಿಸ್ (ಬಾಲ ನ್ಯಾಯ) ಕಾಯಿದೆ, ಶಿಕ್ಷಣದ ಹಕ್ಕು ಕಾಯಿದೆ ಮತ್ತು ವಿವಿಧ ಪುನರ್ವಸತಿ ಯೋಜನೆಗಳು ಅಸ್ತಿತ್ವದಲ್ಲಿದ್ದರೂ, ಅವುಗಳ ಜಾರಿಗೆ ಇರುವ ಸವಾಲುಗಳು ನಿರಾಶ್ರಿತ ಮಕ್ಕಳ ಜೀವನ ಮಟ್ಟದಲ್ಲಿ ಪರ್ಯಾಯ ಬದಲಾವಣೆ ತರುವಲ್ಲಿ ವಿಫಲವಾಗಿವೆ. ಈ ಅಧ್ಯಯನವು ಕಲ್ಯಾಣ ರಾಜ್ಯ ಸಿದ್ಧಾಂತ, ಹಕ್ಕು-ಆಧಾರಿತ ದೃಷ್ಟಿಕೋನ ಮತ್ತು ಸಾಮರ್ಥ್ಯ ಸಿದ್ಧಾಂತಗಳನ್ನು ಸಿದ್ಧಾಂತಾತ್ಮಕ ಆಧಾರವಾಗಿ ಬಳಸಿಕೊಂಡು, ಕರ್ನಾಟಕದಲ್ಲಿ ನೀತಿ ನಿರೂಪಣೆ ಮತ್ತು ಜಾರಿಗೆ ಇರುವ ಅಂತರವನ್ನು ಪರಿಶೀಲಿಸುತ್ತದೆ. ವಿಶೇಷವಾಗಿ ಕರ್ನಾಟಕದಲ್ಲಿ ಶಿಕ್ಷಣ, ಮಾನಸಿಕ ಆರೋಗ್ಯ ಮತ್ತು ಸ್ಥಳೀಯ ಆಡಳಿತದ ಪಾತ್ರವನ್ನು ವಿಶ್ಲೇಷಿಸಲಾಗಿದೆ. ಅಧ್ಯಯನವು ತಿಳಿಸುವಂತೆ ಸಬಲೀಕರಣ ಕೇವಲ ಆಶ್ರಯ ಒದಗಿಸುವುದರಿಂದ ಸಾಧ್ಯವಿಲ್ಲ, ಅದು ಸಮಗ್ರ ಹಕ್ಕು-ಆಧಾರಿತ, ಸಮನ್ವಯಿತ ಮತ್ತು ಒಳಗೊಂಡ ಆಡಳಿತ ವ್ಯವಸ್ಥೆಯನ್ನು ಅಗತ್ಯಪಡಿಸುತ್ತದೆ. ಈ ಪ್ರಬಂಧವು ನಿರಾಶ್ರಿತ ಮಕ್ಕಳ ಪ್ರಶ್ನೆಯನ್ನು ಸಾಮಾಜಿಕ ಕಲ್ಯಾಣದ ವಿಷಯವಷ್ಟೇ ಅಲ್ಲ, ಪ್ರಜಾಸತ್ತಾತ್ಮಕ ಆಡಳಿತದ ಗುಣಮಟ್ಟದ ಸೂಚಕವಾಗಿ ಪರಿಗಣಿಸುತ್ತದೆ.

## KEYWORDS:

ಕಲ್ಯಾಣ ರಾಜ್ಯ, ನಿರಾಶ್ರಿತರ ಮಕ್ಕಳು, ಸಬಲೀಕರಣ, ಕರ್ನಾಟಕ, ನೀತಿ, ಅನುಷ್ಠಾನ.

**ಅಧ್ಯಯನದ ಉದ್ದೇಶಗಳು:**

- ಭಾರತದಲ್ಲಿ ನಿರಾಶ್ರಿತ ಮಕ್ಕಳ ಕಾನೂನು ಮತ್ತು ನೀತಿ ಚೌಕಟ್ಟನ್ನು ವಿಶ್ಲೇಷಿಸುವುದು.
- ನಿರಾಶ್ರಿತ ಮಕ್ಕಳ ಸ್ಥಿತಿಗತಿ ಮತ್ತು ಸಬಲೀಕರಣ ಕ್ರಮಗಳನ್ನು ಪರಿಶೀಲಿಸುವುದು.
- ನೀತಿ ಜಾರಿಗೆ ಇರುವ ಆಡಳಿತಾತ್ಮಕ ಮತ್ತು ಸಂಸ್ಥಾತ್ಮಕ ಸವಾಲುಗಳನ್ನು ಗುರುತಿಸುವುದು.
- ರಾಜ್ಯಶಾಸ್ತ್ರದ ಸಿದ್ಧಾಂತಗಳ ಬೆಳಕಿನಲ್ಲಿ ಸಬಲೀಕರಣದ ಸಮಗ್ರ ಮಾದರಿಯನ್ನು ಪರೀಕ್ಷಿಸುವುದು.

**ಸಂಶೋಧನಾ ವಿಧಾನ:**

ಈ ಅಧ್ಯಯನವು ಗುಣಾತ್ಮಕ (Qualitative) ಸ್ವರೂಪದ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಸಂಶೋಧನೆಯಾಗಿದೆ. ಪ್ರಾಥಮಿಕವಾಗಿ ದ್ವಿತೀಯ ಮೂಲಗಳ (Secondary Sources) ಮೇಲೆ ಅವಲಂಬಿತವಾಗಿದೆ. ಸರ್ಕಾರದ ವರದಿಗಳು, ಕಾನೂನು ದಾಖಲೆಗಳು, ಸಂಶೋಧನಾ ಲೇಖನಗಳು, ಪಿಎಚ್.ಡಿ. ಪ್ರಬಂಧಗಳು ಮತ್ತು ನೀತಿ ವಿಶ್ಲೇಷಣಾ ಅಧ್ಯಯನಗಳನ್ನು ಪರಿಶೀಲಿಸಲಾಗಿದೆ. ಸಾಹಿತ್ಯ ಸಮೀಕ್ಷೆಯ ಮೂಲಕ ಪ್ರಮುಖ ಸಿದ್ಧಾಂತಾತ್ಮಕ ಚೌಕಟ್ಟು ರೂಪಿಸಲಾಗಿದೆ. ಕರ್ನಾಟಕದ ಸಂದರ್ಭವನ್ನು ವಿವರಿಸಲು ಶಿಕ್ಷಣ, ಮಾನಸಿಕ ಆರೋಗ್ಯ ಮತ್ತು ಸ್ಥಳೀಯ ಆಡಳಿತ ಕುರಿತ ಅಧ್ಯಯನಗಳನ್ನು ವಿಶ್ಲೇಷಿಸಲಾಗಿದೆ.

ವಿವರಣಾತ್ಮಕ ವಿಶ್ಲೇಷಣೆ (Descriptive Analysis) ಮತ್ತು ವಿಮರ್ಶಾತ್ಮಕ ವಿಶ್ಲೇಷಣೆ (Critical Analysis) ವಿಧಾನಗಳನ್ನು ಬಳಸಲಾಗಿದೆ. ಈ ಅಧ್ಯಯನವು ಹೋಲಿಕೆ ಮತ್ತು ವಿಷಯಾಧಾರಿತ ವಿಶ್ಲೇಷಣೆಯ ಮೂಲಕ ನೀತಿ ಮತ್ತು ಜಾರಿಗೆ ಇರುವ ಅಂತರವನ್ನು ಗುರುತಿಸುತ್ತದೆ.

**ಸಾಹಿತ್ಯ ಸಮೀಕ್ಷೆ:**

ಭಾರತದಲ್ಲಿ ಬೀದಿ ಮತ್ತು ನಿರಾಶ್ರಿತ ಮಕ್ಕಳ ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಶೇಖರ್ ಮತ್ತು ರೈ (2025) ಅವರ ಅಧ್ಯಯನವು ಬೀದಿ ಮಕ್ಕಳಿಗಾಗಿ ರೂಪುಗೊಂಡ ಕಾನೂನುಗಳ ಪರಿಣಾಮಕಾರಿತ್ವವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ, ಜಾರಿಗೆ ಇರುವ ಅಡೆತಡೆಗಳನ್ನು ಗುರುತಿಸುತ್ತದೆ. ಗುರುಂಗ್ (2004) ಅವರು ಶಿಕ್ಷಣ ಹಕ್ಕಿನ ಅನುಷ್ಠಾನದಲ್ಲಿ ನೀತಿ ಮತ್ತು ನೆಲಮಟ್ಟದ ವಾಸ್ತವಿಕತೆಯ ನಡುವೆ ಅಂತರವಿರುವುದನ್ನು ತೋರಿಸಿದ್ದಾರೆ. ಡಾ. ತಿಪ್ಪೇಸ್ವಾಮಿ ಹೆಚ್ ಬರೆದಿರುವ "ಬಾಲಕಾರ್ಮಿಕರ ಸಮಸ್ಯೆಗಳು" ಪುಸ್ತಕದಲ್ಲಿ ನಿರಾಶ್ರಿತ ಮಕ್ಕಳು ಬಾಲಕಾರ್ಮಿಕರಾಗಿ ಬದಲಾಗಲು ಕಾರಣಗಳನ್ನು ಪ್ರಸ್ತಾಪಿಸಿದ್ದಾರೆ.

ಕರ್ನಾಟಕದ ಸಂದರ್ಭದಲ್ಲಿ ಐಪೆ (2021) ಅವರ ಅಧ್ಯಯನವು ಮಕ್ಕಳ ಹಕ್ಕುಗಳ ಆಡಳಿತ ಮತ್ತು ಶಾಲಾ ವ್ಯವಸ್ಥೆಯ ಪಾತ್ರವನ್ನು ವಿಶ್ಲೇಷಿಸುತ್ತದೆ. ಮರಿಯಾ (2022) ಅವರು ಬೆಂಗಳೂರಿನ ಬೀದಿ ಮಕ್ಕಳ ಶಿಕ್ಷಣ ಪ್ರವೇಶದಲ್ಲಿ ಎನ್‌ಜಿಒಗಳ ಪಾತ್ರವನ್ನು ವಿವರಿಸುತ್ತಾರೆ. ವೆಪರಾಲ (2019) ಅವರು ನಿರಾಶ್ರಿತ ಮತ್ತು ಮಾನಸಿಕ ಅಸ್ವಸ್ಥ ಮಹಿಳೆಯರ ಆರೈಕೆಯ ನಿರಂತರತೆಯ ಸಮಸ್ಯೆಯನ್ನು ವಿಶ್ಲೇಷಿಸಿದ್ದಾರೆ, ಇದು ಮಕ್ಕಳ ಮೇಲೆಯೂ ಪರಿಣಾಮ ಬೀರುತ್ತದೆ.

ಈ ಸಾಹಿತ್ಯವು ಕಾನೂನು ಮತ್ತು ನೀತಿಗಳು ಅಸ್ತಿತ್ವದಲ್ಲಿದ್ದರೂ, ಸಮಗ್ರ ಆಡಳಿತಾತ್ಮಕ ಸಮನ್ವಯದ ಕೊರತೆಯೇ ಪ್ರಮುಖ ಸವಾಲು ಎಂಬುದನ್ನು ಸೂಚಿಸುತ್ತದೆ.

**ಪ್ರಾಕ್ ಕಲ್ಪನೆಗಳು**

1. ಕರ್ನಾಟಕದಲ್ಲಿ ನಿರಾಶ್ರಿತ ಮಕ್ಕಳಿಗಾಗಿ ರೂಪುಗೊಂಡಿರುವ ನೀತಿಗಳು ಸಮರ್ಪಕವಾಗಿ ಜಾರಿಯಾಗದಿರುವುದರಿಂದ ಸಬಲೀಕರಣದ ಗುರಿ ಸಂಪೂರ್ಣವಾಗಿ ಸಾಧಿಸಲಾಗುತ್ತಿಲ್ಲ.
2. ವಿವಿಧ ಇಲಾಖೆಗಳ ನಡುವಿನ ಸಮನ್ವಯ ಮತ್ತು ಸ್ಥಳೀಯ ಆಡಳಿತದ ಸಕ್ರಿಯ ಪಾಲ್ಗೊಳ್ಳುವಿಕೆ ಹೆಚ್ಚಿದಲ್ಲಿ ನಿರಾಶ್ರಿತ ಮಕ್ಕಳ ಸಬಲೀಕರಣದ ಮಟ್ಟವು ಸುಧಾರಿಸುತ್ತದೆ.

**ಪೀಠಿಕೆ:**

ನಿರಾಶ್ರಿತ ಮಕ್ಕಳು ಸಮಾಜದ ಅಸಮಾನತೆ ಮತ್ತು ಆಡಳಿತಾತ್ಮಕ ಸವಾಲುಗಳ ತೀವ್ರತೆಯನ್ನು ಪ್ರತಿಬಿಂಬಿಸುವ ಅಂಚಿನ ವರ್ಗವಾಗಿದೆ. ಮನೆ ಮತ್ತು ಕುಟುಂಬದ ಬೆಂಬಲದಿಂದ ವಂಚಿತರಾದ ಈ ಮಕ್ಕಳು ಬೀದಿ ಜೀವನಕ್ಕೆ ತಳ್ಳಲ್ಪಡುತ್ತಾರೆ; ಇದನ್ನು ಕೇವಲ ದಾರಿದ್ರ್ಯದ ಸಮಸ್ಯೆಯಾಗಿ ನೋಡುವುದು ಅಪೂರ್ಣವಾಗಿದೆ. ಭಾರತದಲ್ಲಿ ನಗರೀಕರಣ ಮತ್ತು ವಲಸೆಯಿಂದ ಸಮಸ್ಯೆ ಗಂಭೀರಗೊಂಡಿದ್ದು, ಕಾನೂನುಗಳಿದ್ದರೂ ಜಾರಿಗೆ ಅಂತರವಿದೆ. ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ಬೀದಿ ಮಕ್ಕಳ ಪ್ರಮಾಣ ಹೆಚ್ಚಿದ್ದು, ಶಿಕ್ಷಣ ಮತ್ತು ಪುನರ್ವಸತಿಗೆ ಸಮನ್ವಯಿತ ಕ್ರಮಗಳು ಅಗತ್ಯವೆಂದು ಅಧ್ಯಯನಗಳು ಸೂಚಿಸುತ್ತವೆ. ಉತ್ತರ ಕರ್ನಾಟಕದಲ್ಲಿ ಸ್ಥಳೀಯ ಆಡಳಿತ ಮತ್ತು ಸಮುದಾಯ ಪಾಲ್ಗೊಳ್ಳುವಿಕೆ ಸಬಲೀಕರಣಕ್ಕೆ ಪ್ರಮುಖವೆಂದು ಕಂಡುಬಂದಿದೆ. ಮಾನಸಿಕ ಆರೋಗ್ಯ ಮತ್ತು ಕುಟುಂಬ ವಿಕೋಪವೂ ಪ್ರಮುಖ ಕಾರಣಗಳಾಗಿವೆ. ರಾಜ್ಯಶಾಸ್ತ್ರೀಯವಾಗಿ ಸಬಲೀಕರಣವು ಹಕ್ಕು, ಶಿಕ್ಷಣ ಮತ್ತು ಆರೋಗ್ಯದ ಸಮಗ್ರ ಪ್ರವೇಶವನ್ನು ಸೂಚಿಸುತ್ತದೆ. ಹೀಗಾಗಿ, ಕರ್ನಾಟಕದಲ್ಲಿ ನಿರಾಶ್ರಿತ ಮಕ್ಕಳ ಪ್ರಶ್ನೆಯನ್ನು ಹಕ್ಕು–ಆಧಾರಿತ ಮತ್ತು ಸಮಗ್ರ ಆಡಳಿತದ ಚೌಕಟ್ಟಿನಲ್ಲಿ ವಿಶ್ಲೇಷಿಸುವುದು ಅಗತ್ಯವಾಗಿದೆ.

**ಸೈದ್ಧಾಂತಿಕ ಚೌಕಟ್ಟು:**

ನಿರಾಶ್ರಿತ ಮಕ್ಕಳ ಸಬಲೀಕರಣವನ್ನು ರಾಜ್ಯಶಾಸ್ತ್ರೀಯ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಲು ಕೇವಲ ಕಲ್ಯಾಣ ಯೋಜನೆಗಳ ವಿವರಣೆ ಸಾಕಾಗುವುದಿಲ್ಲ; ಅದು ಸೈದ್ಧಾಂತಿಕ ಚೌಕಟ್ಟಿನ ಒಳಗೆ ವಿಶ್ಲೇಷಣೆಗೆ ಒಳಪಡಬೇಕು. ಈ ಅಧ್ಯಯನವು ಮುಖ್ಯವಾಗಿ ನಾಲ್ಕು ಸಿದ್ಧಾಂತಾತ್ಮಕ ದೃಷ್ಟಿಕೋನಗಳನ್ನು ಆಧರಿಸಿದೆ. (1) ಕಲ್ಯಾಣ ರಾಜ್ಯದ ಪರಿಕಲ್ಪನೆ, (2) ಹಕ್ಕು ಆಧಾರಿತ ದೃಷ್ಟಿಕೋನ, (3) ಸಾಮರ್ಥ್ಯ ದೃಷ್ಟಿಕೋನ, (4) ಒಳಗೊಳ್ಳುವ ಆಡಳಿತ (inclusive governance).

ಕಲ್ಯಾಣ ರಾಜ್ಯ (Welfare State): ಪರಿಕಲ್ಪನೆಯು ನಾಗರಿಕರ ಮೂಲಭೂತ ಅಗತ್ಯಗಳನ್ನು ಪೂರೈಸುವ ಜವಾಬ್ದಾರಿಯನ್ನು ರಾಜ್ಯಕ್ಕೆ ವಹಿಸಿದೆ. ಶಿಕ್ಷಣ, ಆರೋಗ್ಯ ಮತ್ತು ಆಶ್ರಯವು ಸರ್ಕಾರದ ಸಾಮಾಜಿಕ ಬದ್ಧತೆಗಳಾಗಿವೆ. ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಕಲ್ಯಾಣ ನೀತಿಗಳು ದಾರಿದ್ರ್ಯ ನಿವಾರಣೆಯೊಂದಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಉದ್ದೇಶ ಹೊಂದಿವೆ. ಆದರೆ ಜನ ಕಲ್ಯಾಣದಿಂದ ಜನರ ಸಬಲೀಕರಣದತ್ತ ಸಾಗುವ ಪರಿವರ್ತನೆ ಅತ್ಯಗತ್ಯವೆಂದು ಕರ್ನಾಟಕದ ಸಮಗ್ರ ಅಭಿವೃದ್ಧಿ ಕುರಿತು ನಡೆದ ಅಧ್ಯಯನ ಸೂಚಿಸುತ್ತದೆ (Kadekodi, 2017). ಅಂದರೆ, ಕೇವಲ ನೆರವು ನೀಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ; ದೀರ್ಘಕಾಲಿಕ ಸಾಮರ್ಥ್ಯ ನಿರ್ಮಾಣ ಅಗತ್ಯ.

ಹಕ್ಕು ಆಧಾರಿತ ದೃಷ್ಟಿಕೋನ (Rights–Based Approach): ನಿರಾಶ್ರಿತ ಮಕ್ಕಳನ್ನು ದಯೆಗೆ ಪಾತ್ರರಾಗಿರುವ ವ್ಯಕ್ತಿಗಳು ಎಂಬುದಾಗಿ ಪರಿಗಣಿಸದೆ, ಹಕ್ಕುಗಳನ್ನು ಹೊಂದಿರುವ

ನಾಗರಿಕರಾಗಿ ಪರಿಗಣಿಸುತ್ತದೆ. ಬೀದಿ ಮಕ್ಕಳ ಕುರಿತ ಕಾನೂನು ಮತ್ತು ನೀತಿ ವಿಶ್ಲೇಷಣೆಗಳು, ಬಾಲ ನ್ಯಾಯ ಕಾಯಿದೆ ಮತ್ತು ಇತರ ಮಕ್ಕಳ ರಕ್ಷಣಾ ಕಾನೂನುಗಳಿದ್ದರೂ ಸಹ ಅವುಗಳ ಜಾರಿಯಲ್ಲಿ ಅಂತರವಿರುವುದನ್ನು ತೋರಿಸಿವೆ (Shekhar & Rai, 2025). ಈ ದೃಷ್ಟಿಕೋನವು ರಾಜ್ಯವನ್ನು ಉತ್ತರದಾಯಿತ್ವದ (accountability) ಚೌಕಟ್ಟಿನಲ್ಲಿ ವಿಶ್ಲೇಷಿಸುತ್ತದೆ. ನ್ಯಾಯಾಂಗದ ಹಸ್ತಕ್ಷೇಪವು ಸಹ ಈ ಹಕ್ಕು-ಆಧಾರಿತ ರಾಜಕೀಯ ಚರ್ಚೆಯನ್ನು ಬಲಪಡಿಸುತ್ತದೆ (Bhattacharjee & Narayan, 2024).

ಸಾಮರ್ಥ್ಯ ದೃಷ್ಟಿಕೋನ (Capability Approach): ಅಮರ್ತ್ಯ ಸೇನ್ ಅವರ ತತ್ವದ ಮೇಲೆ ಆಧಾರಿತವಾಗಿದ್ದು, ವ್ಯಕ್ತಿಯ ಆಯ್ಕೆಯ ಸ್ವಾತಂತ್ರ್ಯ ಮತ್ತು ಜೀವನದ ಗುಣಮಟ್ಟವನ್ನು ಕೇಂದ್ರಬಿಂದುವಾಗಿರಿಸುತ್ತದೆ. ನಿರಾಶ್ರಿತ ಮಕ್ಕಳಿಗೆ ಕೇವಲ ಆಶ್ರಯವಲ್ಲ, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗಳ ಮೂಲಕ ಜೀವನದ ಆಯ್ಕೆಗಳನ್ನು ವಿಸ್ತರಿಸುವುದು ಮುಖ್ಯ. ಕರ್ನಾಟಕದ ಶಾಲಾ ಆಡಳಿತ ಮತ್ತು ಮಕ್ಕಳ ಹಕ್ಕುಗಳ ಅಧ್ಯಯನವು ಸ್ಥಳೀಯ ಮಟ್ಟದಲ್ಲಿ ಮಕ್ಕಳ ಧ್ವನಿಗೆ ಅವಕಾಶ ನೀಡುವ ವ್ಯವಸ್ಥೆಯು ಸಬಲೀಕರಣದ ಪ್ರಮುಖ ಅಂಶವೆಂದು ಸೂಚಿಸುತ್ತದೆ (Ipe, 2021).

ಒಳಗೊಳ್ಳುವ ಆಡಳಿತ (Inclusive Governance): ಕರ್ನಾಟಕದ ಗ್ರಾಮ ಪಂಚಾಯಿತಿಗಳಲ್ಲಿ ಮಕ್ಕಳ ಸ್ನೇಹಿ ಆಡಳಿತ ವ್ಯವಸ್ಥೆಯ ವಿಶ್ಲೇಷಣೆ, ಸಂಸ್ಥಾತ್ಮಕ ಸಾಮರ್ಥ್ಯ ಮತ್ತು ಸಮುದಾಯದ ಭಾಗವಹಿಸುವಿಕೆಯು ಉತ್ತಮ ಆಡಳಿತಕ್ಕೆ ಕಾರಣವಾಗುತ್ತದೆ ಎಂದು ತೋರಿಸಿದೆ (Rao, Prasad, & UC, 2024). "ಅಂಚಿನ ಸಮುದಾಯಗಳ ಸಬಲೀಕರಣ" ಕುರಿತ ಅಧ್ಯಯನವು, ಸ್ಥಳೀಯ ಆಡಳಿತದ ಸಕ್ರಿಯ ಹಸ್ತಕ್ಷೇಪವು ಸಾಮಾಜಿಕ ಒಳಗೊಳ್ಳುವಿಕೆಯನ್ನು ಬಲಪಡಿಸುತ್ತದೆ ಎಂದು ಒತ್ತಿಹೇಳುತ್ತದೆ (Patil & Dhavaleshwar, 2024).

ಹೀಗಾಗಿ ಈ ಸೈದ್ಧಾಂತಿಕ ಚೌಕಟ್ಟು ನಿರಾಶ್ರಿತ ಮಕ್ಕಳ ಪ್ರಶ್ನೆಯನ್ನು ಕಲ್ಯಾಣ, ಹಕ್ಕು, ಸಾಮರ್ಥ್ಯ ಮತ್ತು ಒಳಗೊಂಡ ಆಡಳಿತ ಎಂಬ ನಾಲ್ಕು ಆಯಾಮಗಳಲ್ಲಿ ಸಮಗ್ರವಾಗಿ ವಿಶ್ಲೇಷಿಸಲು ಸಹಕಾರಿಯಾಗಿದೆ.

**ಭಾರತದಲ್ಲಿ ನಿರಾಶ್ರಿತ ಮಕ್ಕಳ ಸ್ಥಿತಿ:**

ಭಾರತದಲ್ಲಿ ನಿರಾಶ್ರಿತ ಮಕ್ಕಳ ಸಮಸ್ಯೆಯು ಬಹು ಆಯಾಮೀಯವಾಗಿದೆ. ನಗರೀಕರಣ, ಗ್ರಾಮೀಣ ಬಡತನ, ವಲಸೆ, ಕುಟುಂಬ ಹಿಂಸೆ, ಮಕ್ಕಳ ಮೇಲಿನ ದುರ್ಬಳಕೆ ಮತ್ತು ಉದ್ಯೋಗದ ಅನಿಶ್ಚಿತತೆ ಇವುಗಳ ಸಾಮೂಹಿಕ ಪರಿಣಾಮವಾಗಿ ಸಾವಿರಾರು ಮಕ್ಕಳು ಬೀದಿಗಳಲ್ಲಿ ಬದುಕು ಸಾಗಿಸುತ್ತಿದ್ದಾರೆ. "ಬೀದಿ ಮಕ್ಕಳು" ಎಂಬ ಪದವು ಕೇವಲ ಆಶ್ರಯವಿಲ್ಲದ ಮಕ್ಕಳನ್ನಷ್ಟೇ ಸೂಚಿಸುವುದಿಲ್ಲ; ಅದು ಕುಟುಂಬದಿಂದ ದೂರವಾದ, ಸಾರ್ವಜನಿಕ ಸ್ಥಳಗಳಲ್ಲಿ ಕೆಲಸ ಮಾಡುವ, ಅಥವಾ ಸಂಪೂರ್ಣವಾಗಿ ಬೀದಿಗಳಲ್ಲೇ ಜೀವನ ನಡೆಸುವ ಮಕ್ಕಳನ್ನು ಒಳಗೊಂಡಿದೆ (Jayaraj, 2025).

ಭಾರತದಲ್ಲಿ ಈ ಸಮಸ್ಯೆಯನ್ನು ಎದುರಿಸಲು ಕಾನೂನು ಮತ್ತು ನೀತಿ ಚೌಕಟ್ಟು ರೂಪುಗೊಂಡಿದೆ. ಬಾಲ ನ್ಯಾಯ ಕಾಯಿದೆ, ಮಕ್ಕಳ ಶಿಕ್ಷಣದ ಹಕ್ಕು ಕಾಯಿದೆ, ಹಾಗೂ ವಿವಿಧ ಪುನರ್ವಸತಿ ಯೋಜನೆಗಳು ನಿರಾಶ್ರಿತ ಮಕ್ಕಳ ರಕ್ಷಣೆಯ ಉದ್ದೇಶವನ್ನು ಹೊಂದಿವೆ. ಆದಾಗ್ಯೂ, ನೀತಿ-ವಿಶ್ಲೇಷಣೆಗಳು ಕಾನೂನುಗಳ ಅಸ್ತಿತ್ವವೇ ಮಕ್ಕಳ ಜೀವನದಲ್ಲಿ ಬದಲಾವಣೆಯನ್ನು ಖಚಿತಪಡಿಸುವುದಿಲ್ಲವೆಂದು ಸೂಚಿಸುತ್ತವೆ. ಶೇಖರ್ ಮತ್ತು ರೈ

(2025) ಅವರ ಅಧ್ಯಯನವು ಬೀದಿ ಮಕ್ಕಳಿಗಾಗಿ ರೂಪುಗೊಂಡ ಕಾನೂನು ಅವಕಾಶಗಳ ಜಾರಿಗೆ ಅಡೆತಡೆಗಳು, ಆಡಳಿತಾತ್ಮಕ ನಿರ್ಲಕ್ಷ್ಯ ಮತ್ತು ಸಮನ್ವಯದ ಕೊರತೆಗಳನ್ನು ವಿವರಿಸುತ್ತದೆ. ಇದೇ ರೀತಿಯಾಗಿ, ರೈ ಮತ್ತು ಶೇಖರ್ (2025) ಅವರು ಸರ್ಕಾರದ ಯೋಜನೆಗಳು ಹಲವು ವೇಳೆ ಕೇವಲ ಸರ್ಕಾರಿ ದಾಖಲೆಗಳಲ್ಲಿ ಮಾತ್ರ ಸೀಮಿತವಾಗುತ್ತವೆ ಎಂಬುದನ್ನು ತೋರಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿಯೂ ಇದೇ ಪರಿಸ್ಥಿತಿ ಕಂಡುಬರುತ್ತದೆ. UNESCO ಪ್ರಾಯೋಜಿತ ಅಧ್ಯಯನವು ಬೀದಿ ಮಕ್ಕಳ ಶಿಕ್ಷಣ ಹಕ್ಕಿನ ಅನುಷ್ಠಾನದಲ್ಲಿ ನೀತಿ ಮತ್ತು ನೆಲಮಟ್ಟದ ವಾಸ್ತವಿಕತೆಯ ನಡುವೆ ಅಂತರವಿರುವುದನ್ನು ಸೂಚಿಸುತ್ತದೆ (Gurung, 2004). ಶಾಲಾ ಪ್ರವೇಶ ಇದ್ದರೂ ನಿರಂತರ ಹಾಜರಾತಿ, ಗುರುತಿನ ದಾಖಲೆಗಳ ಕೊರತೆ ಮತ್ತು ಕುಟುಂಬ ಬೆಂಬಲದ ಅಭಾವವು ಮಕ್ಕಳ ಶಿಕ್ಷಣವನ್ನು ಅಸ್ಥಿರಗೊಳಿಸುತ್ತವೆ. ವಾಲ್ಟರ್ಸ್ (2014) ಅವರು ನಗರ ನಿರಾಶ್ರಿತರ ಮೂಲಭೂತ ಹಕ್ಕುಗಳ (ನೀರು ಮತ್ತು ಸ್ವಚ್ಛತೆ) ಕೊರತೆಯು ಮಕ್ಕಳ ಆರೋಗ್ಯ ಮತ್ತು ಜೀವನ ಮಟ್ಟದ ಮೇಲೆ ನೇರ ಪರಿಣಾಮ ಬೀರುತ್ತದೆ ಎಂದು ಸೂಚಿಸುತ್ತಾರೆ.

ಮಾನವ ಹಕ್ಕುಗಳ ದೃಷ್ಟಿಯಿಂದ ನಿರಾಶ್ರಿತ ಮಕ್ಕಳ ಸಮಸ್ಯೆಯು ರಾಜ್ಯದ ಉತ್ತರದಾಯಿತ್ವದ ಪ್ರಶ್ನೆಯಾಗಿದೆ. ಭಟ್ಟಾಚಾರ್ಯ ಮತ್ತು ನಾರಾಯಣ್ (2024) ಅವರು ನ್ಯಾಯಾಂಗದ ಹಸ್ತಕ್ಷೇಪವು ಸರ್ಕಾರವನ್ನು ನಿರಾಶ್ರಿತರಿಗಾಗಿ ಹೊಣೆಗಾರರನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಹೇಳುತ್ತಾರೆ. ಪ್ಯಾಂಟರ್–ಬ್ರಿಕ್ (2002) ಅವರ ವಿಮರ್ಶಾತ್ಮಕ ಅಧ್ಯಯನವು ಬೀದಿ ಮಕ್ಕಳ ಕುರಿತು ಇರುವ ಸಾಮಾನ್ಯ ಕಲ್ಪನೆಗಳನ್ನು ಪ್ರಶ್ನಿಸಿ, ಅವರನ್ನು ಕೇವಲ ಪೀಡಿತರಾಗಿ ನೋಡದೆ ಹಕ್ಕುಗಳನ್ನು ಹೊಂದಿರುವ ವ್ಯಕ್ತಿಗಳಾಗಿ ಪರಿಗಣಿಸಬೇಕೆಂದು ಸೂಚಿಸುತ್ತದೆ.

ಇದಲ್ಲದೆ, ಸಾಮಾಜಿಕ ಮತ್ತು ಮಾನಸಿಕ ಆಯಾಮಗಳೂ ಗಮನಾರ್ಹವಾಗಿವೆ. ನಿರಾಶ್ರಿತ ಮಕ್ಕಳು ಹಿಂಸೆ, ಮಾದಕವಸ್ತು ಬಳಕೆ, ಹಾಗೂ ಮಾನಸಿಕ ಅಸ್ಥಿರತೆಯ ಅಪಾಯಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚು. ಶಿವರಾಮಕೃಷ್ಣನ್ (2006) ಅವರು ಬೀದಿ ಮಕ್ಕಳ ಜೀವನ ಶೈಲಿಯು ಸಾಮಾಜಿಕ ಬಹಿಷ್ಕರಣೆಯೊಂದಿಗೆ ನೇರವಾಗಿ ಸಂಬಂಧ ಹೊಂದಿದೆ ಎಂಬುದನ್ನು ಉಲ್ಲೇಖಿಸಿದ್ದಾರೆ.

ಒಟ್ಟಿನಲ್ಲಿ ಭಾರತದಲ್ಲಿ ನಿರಾಶ್ರಿತ ಮಕ್ಕಳ ಸ್ಥಿತಿ ಕಾನೂನು ಮತ್ತು ನೀತಿ ರೂಪಣೆಗಳಿದ್ದರೂ ಜಾರಿಗೆ ಇರುವ ದುರ್ಬಲತೆಯಿಂದ ಸಂಕೀರ್ಣವಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ಕೇವಲ ಕಲ್ಯಾಣ ಯೋಜನೆಗಳು ಸಾಕಾಗುವುದಿಲ್ಲ. ಸಮಗ್ರ ಹಕ್ಕು–ಆಧಾರಿತ ಆಡಳಿತ, ಇಲಾಖೆಗಳ ನಡುವಿನ ಸಮನ್ವಯ ಮತ್ತು ನೆಲಮಟ್ಟದ ಜವಾಬ್ದಾರಿತ್ವ ಅತ್ಯಗತ್ಯವಾಗಿದೆ.

**ಕರ್ನಾಟಕದ ಸಂದರ್ಭ:**

ಕರ್ನಾಟಕದಲ್ಲಿ ನಿರಾಶ್ರಿತ ಮತ್ತು ಬೀದಿ ಮಕ್ಕಳ ಪರಿಸ್ಥಿತಿ ನಗರೀಕರಣ, ಆರ್ಥಿಕ ಅಸಮಾನತೆ ಮತ್ತು ಸಾಮಾಜಿಕ ಅಸ್ಥಿರತೆಗಳೊಂದಿಗೆ ನಿಕಟವಾಗಿ ಸಂಬಂಧಿಸಿದೆ. ವಿಶೇಷವಾಗಿ ಬೆಂಗಳೂರು ಮಹಾನಗರವು ವೇಗವಾದ ನಗರ ವಿಸ್ತರಣೆ, ಗ್ರಾಮೀಣ ವಲಸೆ ಮತ್ತು ಅನೌಪಚಾರಿಕ ಉದ್ಯೋಗ ವಲಯದ ಬೆಳವಣಿಗೆಯಿಂದ ಬೀದಿ ಮಕ್ಕಳ ಸಂಖ್ಯೆಯಲ್ಲಿ ಏರಿಕೆ ಕಂಡಿದೆ. ಬೀದಿ ಮಕ್ಕಳ ಶಿಕ್ಷಣ ಪ್ರವೇಶ ಮತ್ತು ಸರ್ಕಾರ–ಎನ್‌ಜಿಒಗಳ ಪಾತ್ರವನ್ನು

ವಿಶ್ಲೇಷಿಸಿದ ಅಧ್ಯಯನದಲ್ಲಿ ಯೋಜನೆಗಳ ಅಸ್ತಿತ್ವವಿದ್ದರೂ ಅವುಗಳ ಅನುಷ್ಠಾನದಲ್ಲಿ ಸಮನ್ವಯದ ಕೊರತೆ ಹಾಗೂ ಸಂಸ್ಥಾತ್ಮಕ ಮಿತಿಗಳು ಅಡೆತಡೆಯಾಗಿವೆ ಎಂದು ಸೂಚಿಸುತ್ತದೆ (Maria, 2022).

ಕರ್ನಾಟಕದ ಶಾಲಾ ಆಡಳಿತ ವ್ಯವಸ್ಥೆಯಲ್ಲಿ ಮಕ್ಕಳ ಹಕ್ಕುಗಳ ಅನುಷ್ಠಾನ ಕುರಿತು ಐಪೆ ಅವರು ಕೈಗೊಂಡ ಅಧ್ಯಯನದಿಂದ ಸಂಪನ್ಮೂಲಗಳ ಕೊರತೆಯಿರುವ ಪ್ರದೇಶಗಳಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆ ಮತ್ತು ಹಕ್ಕು ಅರಿವು ಸಬಲೀಕರಣದ ಪ್ರಮುಖ ಅಂಶಗಳಾಗಿವೆ ಎಂದು ತೋರಿಸಿದೆ (Ipe, 2021). ಈ ಅಧ್ಯಯನವು ಉತ್ತರ ಕರ್ನಾಟಕದ ಸಂದರ್ಭದಲ್ಲಿ ಮಕ್ಕಳ ಧ್ವನಿಗೆ ಅವಕಾಶ ನೀಡುವ ಆಡಳಿತಾತ್ಮಕ ಸಂಸ್ಕೃತಿ ಅಗತ್ಯವಿದೆ ಎಂದು ಒತ್ತಿಹೇಳುತ್ತದೆ. ಅಂದರೆ, ನಿರಾಶ್ರಿತ ಮಕ್ಕಳ ಸಮಸ್ಯೆಯನ್ನು ಕೇವಲ ಆಶ್ರಯ ಕೇಂದ್ರಗಳ ಮಟ್ಟದಲ್ಲಿ ನೋಡದೆ, ಶಿಕ್ಷಣ ವ್ಯವಸ್ಥೆಯೊಳಗೆ ಒಳಗೊಳ್ಳುವಿಕೆಯ ದೃಷ್ಟಿಯಿಂದ ವಿಶ್ಲೇಷಿಸಬೇಕಾಗಿದೆ (ಡಾ. ತಿಪ್ಪೇಸ್ವಾಮಿ 2017).

ಮಾನಸಿಕ ಅಸ್ವಸ್ಥತೆಯೊಂದಿಗೆ ಬದುಕುತ್ತಿರುವ ನಿರಾಶ್ರಿತ ಮಹಿಳೆಯರು ಮತ್ತು ಅವರ ಮಕ್ಕಳ ಕುರಿತು ನಡೆದ ದಕ್ಷಿಣ ಭಾರತದ ಅಧ್ಯಯನವು, ಆರೋಗ್ಯ ಮತ್ತು ಸಾಮಾಜಿಕ ಭದ್ರತಾ ವ್ಯವಸ್ಥೆಗಳ ಮಧ್ಯೆ ಸಮನ್ವಯದ ಕೊರತೆಯಿಂದ ನಿರಂತರ ಆರೈಕೆ ಸಾಧ್ಯವಾಗುವುದಿಲ್ಲವೆಂದು ತೋರಿಸುತ್ತದೆ (Veparala, 2019). ಈ ಪರಿಸ್ಥಿತಿ ಮಕ್ಕಳ ದೀರ್ಘಕಾಲಿಕ ಸಬಲೀಕರಣಕ್ಕೆ ಅಡ್ಡಿಯಾಗುತ್ತದೆ.

ಸಾಮಾಜಿಕ ಅಸುರಕ್ಷತೆಯ ಇನ್ನೊಂದು ಆಯಾಮವನ್ನು ನಂಜುಂಡ ಮತ್ತು ಲಕ್ಷ್ಮಿ (2024) ಅವರ ಅಧ್ಯಯನವು ಬೆಳಕು ಚೆಲ್ಲುತ್ತದೆ. ಕರ್ನಾಟಕದಲ್ಲಿ ಅಂಚಿನ ಸಮುದಾಯಗಳ ಮಕ್ಕಳಲ್ಲಿ ಲೈಂಗಿಕ ಶೋಷಣೆ, ಹಿಂಸೆ ಮತ್ತು ಶಿಕ್ಷಣ ವ್ಯತ್ಯಯಗಳು ಹೆಚ್ಚಾಗಿರುವುದು ಕಂಡುಬಂದಿದೆ. ಇಂತಹ ಅಸುರಕ್ಷತೆ ನಿರಾಶ್ರಿತ ಸ್ಥಿತಿಯನ್ನು ಮತ್ತಷ್ಟು ಗಂಭೀರ ಸಮಸ್ಯೆಗಳಿಗೆ ತಳ್ಳುತ್ತದೆ. ಇದೇ ವೇಳೆ ರಾಷ್ಟ್ರೀಯ ಮಟ್ಟದ ನೀತಿ–ವಿಶ್ಲೇಷಣೆಗಳು ರಾಜ್ಯ ಸರ್ಕಾರದ ಯೋಜನೆಗಳು ಸ್ಥಳೀಯ ಮಟ್ಟದಲ್ಲಿ ಸಮರ್ಪಕವಾಗಿ ಜಾರಿಯಾಗದಿದ್ದರೆ ಮಕ್ಕಳ ಜೀವನದಲ್ಲಿ ದೀರ್ಘಕಾಲಿಕ ಬದಲಾವಣೆ ಸಾಧ್ಯವಿಲ್ಲವೆಂದು ಸೂಚಿಸುತ್ತವೆ (Shekhar & Rai, 2025).

ಒಟ್ಟಿನಲ್ಲಿ ಕರ್ನಾಟಕದ ಸಂದರ್ಭದಲ್ಲಿ ನಿರಾಶ್ರಿತ ಮಕ್ಕಳ ಸಮಸ್ಯೆ ಕೇವಲ ದಾರಿದ್ರ್ಯ ಅಥವಾ ವಲಸೆಯ ಪರಿಣಾಮವಲ್ಲ; ಅದು ಆಡಳಿತಾತ್ಮಕ ಸಮನ್ವಯ, ಶಿಕ್ಷಣದ ಒಳಗೊಳ್ಳುವಿಕೆ, ಮಾನಸಿಕ ಆರೋಗ್ಯ ಸೇವೆಗಳು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಗಳೊಂದಿಗೆ ಸಂಬಂಧಿಸಿದ ಸಂಕೀರ್ಣ ಪ್ರಶ್ನೆಯಾಗಿದೆ. ರಾಜ್ಯ ಮತ್ತು ಸ್ಥಳೀಯ ಸ್ವಯಂ ಸರ್ಕಾರಗಳು, ಎನ್‌ಜಿಒಗಳು ಹಾಗೂ ನಾಗರಿಕ ಸಮಾಜ ಒಟ್ಟಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಸಬಲೀಕರಣದ ಗುರಿ ಸಾಧಿಸಬಹುದು. ಹೀಗಾಗಿ ಕರ್ನಾಟಕದಲ್ಲಿ ನಿರಾಶ್ರಿತ ಮಕ್ಕಳ ಪ್ರಶ್ನೆಯನ್ನು ಸಮಗ್ರ ಹಕ್ಕು–ಆಧಾರಿತ ಮತ್ತು ಒಳಗೊಂಡ ಆಡಳಿತದ ಚೌಕಟ್ಟಿನಲ್ಲಿ ವಿಶ್ಲೇಷಿಸುವುದು ಅವಶ್ಯಕವಾಗಿದೆ.

**ನೀತಿ ಜಾರಿಗೆ ಇರುವ ಸವಾಲುಗಳು:**

ನಿರಾಶ್ರಿತ ಮಕ್ಕಳ ರಕ್ಷಣೆಗೆ ಭಾರತ ಮತ್ತು ಕರ್ನಾಟಕದಲ್ಲಿ ಸಮಗ್ರ ಕಾನೂನು ಹಾಗೂ ನೀತಿ ಚೌಕಟ್ಟು ಇದ್ದರೂ, ಅವುಗಳ ಪರಿಣಾಮಕಾರಿತ್ವ ಜಾರಿಗೆ ಅವಲಂಬಿತವಾಗಿದೆ. ಆದರೆ ನೆಲಮಟ್ಟದಲ್ಲಿ ಅನೇಕ ಆಡಳಿತಾತ್ಮಕ, ಸಂಸ್ಥಾತ್ಮಕ ಮತ್ತು ಸಾಮಾಜಿಕ ಅಡೆತಡೆಗಳು

ಕಂಡುಬರುತ್ತವೆ.

ಸರ್ಕಾರದ ವಿವಿಧ ಇಲಾಖೆಗಳ ನಡುವಿನ ಸಮನ್ವಯದ ಕೊರತೆ ಪ್ರಮುಖ ಸವಾಲಾಗಿದೆ. ಮಕ್ಕಳ ಕಲ್ಯಾಣ, ಶಿಕ್ಷಣ, ಆರೋಗ್ಯ, ಪೊಲೀಸ್ ಇಲಾಖೆ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಪರಸ್ಪರ ಸಂಬಂಧಿತವಾಗಿದ್ದರೂ, ಸಮಗ್ರ ಕಾರ್ಯಯೋಜನೆಗಳ ಕೊರತೆ ಮಕ್ಕಳ ಪುನರ್ವಸತಿಯನ್ನು ವಿಳಂಬಗೊಳಿಸುತ್ತದೆ. ಶೇಖರ್ ಮತ್ತು ರೈ (2025) ಅವರ ನೀತಿ-ವಿಶ್ಲೇಷಣೆ ಪ್ರಕಾರ, ಕಾನೂನುಗಳ ಅಸ್ತಿತ್ವವಿದ್ದರೂ ಇಲಾಖೆಗಳ ನಡುವಿನ ಜವಾಬ್ದಾರಿಗಳ ಸ್ಪಷ್ಟತೆ ಮತ್ತು ಮೇಲ್ವಿಚಾರಣೆಯಲ್ಲಿನ ದುರ್ಬಲತೆಯು ಈ ನೀತಿಗಳ ಜಾರಿಗೆ ಅಡ್ಡಿಯಾಗುತ್ತದೆ.

ಗುರುತು ಮತ್ತು ದಾಖಲೆಗಳ ಸಮಸ್ಯೆ ನಿರಾಶ್ರಿತ ಮಕ್ಕಳಿಗೆ ಮೂಲಭೂತ ಸೇವೆಗಳ ಪ್ರವೇಶವನ್ನು ನಿರ್ಬಂಧಿಸುತ್ತದೆ. ಶಾಲಾ ಪ್ರವೇಶ, ಆರೋಗ್ಯ ಸೇವೆ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳಿಗೆ ಅಗತ್ಯವಿರುವ ಗುರುತಿನ ದಾಖಲೆಗಳ ಕೊರತೆಯಿಂದ ಮಕ್ಕಳ ಹಕ್ಕುಗಳು ವ್ಯಾವಹಾರಿಕವಾಗಿ ನಿರಾಕರಿಸಲ್ಪಡುತ್ತವೆ (Gurung, 2004). ಈ ಸ್ಥಿತಿ ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

ಆಶ್ರಯ ಕೇಂದ್ರಗಳ ಗುಣಮಟ್ಟ ಮತ್ತು ಮೇಲ್ವಿಚಾರಣೆ ಪ್ರಶ್ನಾರ್ಹವಾಗಿದೆ. ರೈ ಮತ್ತು ಶೇಖರ್ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಆಶ್ರಯ ಗೃಹಗಳಲ್ಲಿ ಮಾನದಂಡಗಳ ಪಾಲನೆ, ಸುರಕ್ಷತೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಕೊರತೆಗಳಿವೆ ಎಂಬುದನ್ನು ತಿಳಿಸುತ್ತಾರೆ (Rai & Shekhar, 2025). ನ್ಯಾಯಾಂಗದ ಹಸ್ತಕ್ಷೇಪ ಅನೇಕ ಸಂದರ್ಭಗಳಲ್ಲಿ ಆಡಳಿತವನ್ನು ಹೊಣೆಗಾರರನ್ನಾಗಿ ಮಾಡಿದರೂ, ವ್ಯವಸ್ಥಾತ್ಮಕ ಸುಧಾರಣೆ ನಿಧಾನಗತಿಯಲ್ಲಿ ಸಾಗುತ್ತಿರುವುದು ಕಂಡುಬಂದಿದೆ. (Bhattacharjee & Narayan, 2024).

ಮಾನಸಿಕ ಆರೋಗ್ಯ ಮತ್ತು ಸಾಮಾಜಿಕ ಪುನರ್ವಸತಿ ಸೇವೆಗಳ ಕೊರತೆ ಗಂಭೀರ ಸಮಸ್ಯೆಯಾಗಿದೆ. ಬೀದಿ ಜೀವನದ ಅನುಭವಗಳು ಮಕ್ಕಳಲ್ಲಿ ಆತಂಕ, ನಿರಾಶೆ ಮತ್ತು ವರ್ತನಾ ಸಮಸ್ಯೆಗಳಿಗೆ ಕಾರಣವಾಗುತ್ತವೆ. ಆದರೆ, ಮಾನಸಿಕ ಆರೋಗ್ಯ ಸೇವೆಗಳು ಮತ್ತು ಸಮುದಾಯ ಆಧಾರಿತ ಆರೈಕೆ ವ್ಯವಸ್ಥೆಗಳು ಸಮರ್ಪಕವಾಗಿ ವಿಸ್ತರಿಸಲ್ಪಟ್ಟಿಲ್ಲದಿರುವುದನ್ನು ಗುರುತಿಸಲಾಗಿದೆ (Savarkar & Das, 2019; Veparala, 2019). ಇದು ಸಬಲೀಕರಣವನ್ನು ದೀರ್ಘಕಾಲದವರೆಗೆ ದುರ್ಬಲಗೊಳಿಸುತ್ತದೆ.

ದತ್ತಾಂಶ ಮತ್ತು ನಿಖರ ಅಂಕಿ-ಅಂಶಗಳ ಕೊರತೆಯು ನೀತಿ ರೂಪಣೆಯನ್ನು ಕಷ್ಟಕರವಾಗಿಸುತ್ತದೆ. ಬೀದಿ ಮಕ್ಕಳ ಸಂಖ್ಯೆ, ಅವರ ಸಾಮಾಜಿಕ ಹಿನ್ನೆಲೆ ಮತ್ತು ಅಗತ್ಯಗಳ ಕುರಿತು ಸಮಗ್ರ ಮತ್ತು ನವೀಕರಿತ ಮಾಹಿತಿಯ ಕೊರತೆಯಿಂದ ಗುರಿತಟ್ಟಿದ ಯೋಜನೆಗಳನ್ನು ರೂಪಿಸುವುದು ಸವಾಲಾಗುತ್ತದೆ (Jayaraj, 2025).

**ಸಬಲೀಕರಣಕ್ಕಾಗಿ ಸಲಹೆಗಳು:**

ಹಕ್ಕು-ಆಧಾರಿತ ನಗರ ಮಕ್ಕಳ ನೀತಿ (Urban Child Rights Policy) ರೂಪಿಸಬೇಕಾಗಿದೆ. ನಗರ ಪ್ರದೇಶಗಳಲ್ಲಿ ನಿರಾಶ್ರಿತ ಮಕ್ಕಳ ಗುರುತು, ರಕ್ಷಣೆ ಮತ್ತು ಪುನರ್ವಸತಿಗೆ ಸಮಗ್ರ ಚಟುವಟಿಕೆ ರೂಪರೇಖೆ ಅಗತ್ಯ. UNESCO ಅಧ್ಯಯನವು ಶಿಕ್ಷಣ ಹಕ್ಕಿನ ಅನುಷ್ಠಾನದಲ್ಲಿ ಸಮಗ್ರ ದೃಷ್ಟಿಕೋನದ ಅಗತ್ಯವನ್ನು ಒತ್ತಿಹೇಳುತ್ತದೆ (Gurung, 2004). ಹೀಗಾಗಿ, ಶಿಕ್ಷಣ, ಆರೋಗ್ಯ ಮತ್ತು ಆಶ್ರಯ ಸೇವೆಗಳನ್ನು ಒಟ್ಟುಗೂಡಿಸುವ "ಒನ್-ಸ್ಟಾಪ್ ಸಪೋರ್ಟ್ ಸೆಂಟರ್" ಮಾದರಿಯನ್ನು ನಗರ ಮಟ್ಟದಲ್ಲಿ ರೂಪಿಸಬಹುದು.

ಸರ್ಕಾರದ ವಿವಿಧ ಇಲಾಖೆಗಳ ನಡುವೆ ಸಮನ್ವಯ ವ್ಯವಸ್ಥೆಯನ್ನು ಬಲಪಡಿಸುವುದು. ಮಕ್ಕಳ ಕಲ್ಯಾಣ ಸಮಿತಿಗಳು, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಡುವೆ ನಿತ್ಯ ಸಂವಹನ ಮತ್ತು ದತ್ತಾಂಶ ಹಂಚಿಕೆ, ಮೇಲ್ವಿಚಾರಣೆ ಮತ್ತು ಜವಾಬ್ದಾರಿತ್ವ ಪ್ರಮುಖವಾಗಿದೆ. ಆದ್ದರಿಂದ ರಾಜ್ಯ ಮಟ್ಟದಲ್ಲಿ ಸಮಗ್ರ ಡಿಜಿಟಲ್ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸುವುದು ಅಗತ್ಯ.

ಮಾನಸಿಕ ಆರೋಗ್ಯ ಮತ್ತು ಮನೋ–ಸಾಮಾಜಿಕ ಬೆಂಬಲ ಸೇವೆಗಳ ವಿಸ್ತರಣೆ ಅಗತ್ಯವಾಗಿದೆ. ಬೀದಿ ಜೀವನವು ಮಕ್ಕಳಲ್ಲಿ ಮಾನಸಿಕ ಒತ್ತಡ ಮತ್ತು ಅಸ್ಥಿರತೆಯನ್ನು ಉಂಟುಮಾಡುತ್ತದೆ. ಸಮುದಾಯ ಆಧಾರಿತ ಮನೋ–ಸಾಮಾಜಿಕ ಹಸ್ತಕ್ಷೇಪಗಳು ಮತ್ತು ಕುಟುಂಬ ಪುನರ್ಮಿಲನ ಕಾರ್ಯಕ್ರಮಗಳು ದೀರ್ಘಕಾಲಿಕ ಸಬಲೀಕರಣಕ್ಕೆ ಸಹಕಾರಿಯಾಗುತ್ತವೆ. ಜಿಲ್ಲಾ ಮಟ್ಟದಲ್ಲಿ ಮಕ್ಕಳಿಗಾಗಿ ವಿಶೇಷ ಮಾನಸಿಕ ಆರೋಗ್ಯ ಘಟಕಗಳನ್ನು ಸ್ಥಾಪಿಸುವುದು ಸೂಕ್ತವಾಗಿದೆ.

ಶಿಕ್ಷಣದ ಒಳಗೊಳ್ಳುವಿಕೆ ಮತ್ತು ನಿರಂತರತೆ ಮುಖ್ಯವಾಗಿದೆ. ಶಾಲಾ ಪ್ರವೇಶ ಮಾತ್ರವಲ್ಲ, ಹಾಜರಾತಿ ಮತ್ತು ಶೈಕ್ಷಣಿಕ ಬೆಂಬಲ ಕೂಡ ಅಗತ್ಯ. ಐಪೆ (2021) ಅವರ ಅಧ್ಯಯನವು ಶಾಲಾ ಆಡಳಿತದಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆ ಸಬಲೀಕರಣಕ್ಕೆ ನೆರವಾಗುತ್ತದೆ ಎಂದು ಸೂಚಿಸುತ್ತದೆ. ಹೀಗಾಗಿ, ಶಾಲೆಗಳಲ್ಲಿ "ಮಕ್ಕಳ ಸ್ನೇಹಿ ಆಡಳಿತ" ಕ್ರಮಗಳನ್ನು ಬಲಪಡಿಸುವುದು.

ಸಮುದಾಯ ಮತ್ತು ಎನ್‌ಜಿಒಗಳ ಸಹಭಾಗಿತ್ವ ವಿಸ್ತರಿಸುವುದು. ಸರ್ಕಾರ–ಎನ್‌ಜಿಒ ಸಹಭಾಗಿತ್ವವು ಬೀದಿ ಮಕ್ಕಳ ಶಿಕ್ಷಣ ಪ್ರವೇಶದಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ. ಹೀಗಾಗಿ, ಸಾರ್ವಜನಿಕ–ಖಾಸಗಿ ಸಹಭಾಗಿತ್ವ (PPP) ಮಾದರಿಯನ್ನು ಮಕ್ಕಳ ಪುನರ್ವಸತಿಯಲ್ಲಿ ಅನುಸರಿಸುವುದು.

**ಉಪಸಂಹಾರ:**

ನಿರಾಶ್ರಿತ ಮಕ್ಕಳ ಪ್ರಶ್ನೆ ಕೇವಲ ಕಲ್ಯಾಣ ಯೋಜನೆಯ ವಿಷಯವಲ್ಲ; ಅದು ಪ್ರಜಾಸತ್ತಾತ್ಮಕ ಆಡಳಿತದ ಗುಣಮಟ್ಟವನ್ನು ಪರೀಕ್ಷಿಸುವ ರಾಜ್ಯಶಾಸ್ತ್ರೀಯ ಸವಾಲಾಗಿದೆ. ಭಾರತದಲ್ಲಿ ಕಾನೂನು ಚೌಕಟ್ಟು ಇದ್ದರೂ, ಜಾರಿಗೆ ಇರುವ ಅಂತರವು ಸಬಲೀಕರಣವನ್ನು ದುರ್ಬಲಗೊಳಿಸುತ್ತದೆ. ಕರ್ನಾಟಕದಲ್ಲಿ ನಗರೀಕರಣ ಮತ್ತು ವಲಸೆ ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದ್ದು, ಶಿಕ್ಷಣ, ಆಶ್ರಯ ಮತ್ತು ಮಾನಸಿಕ ಆರೋಗ್ಯ ಸೇವೆಗಳ ಸಮನ್ವಯ ಅತ್ಯವಶ್ಯಕವಾಗಿದೆ. ಮಕ್ಕಳ ಪಾಲ್ಗೊಳ್ಳುವಿಕೆ ಮತ್ತು ಹಕ್ಕು ಅರಿವು ಸಬಲೀಕರಣದ ಕೇಂದ್ರಬಿಂದುವಾಗಿರಬೇಕು. ಸಬಲೀಕರಣವು ಕಲ್ಯಾಣದಿಂದ ಹಕ್ಕು ಮತ್ತು ಸಾಮರ್ಥ್ಯದತ್ತ ಸಾಗುವ ಪರಿವರ್ತನೆಯನ್ನು ಸೂಚಿಸುತ್ತದೆ. ಆದ್ದರಿಂದ, ನಿರಾಶ್ರಿತ ಮಕ್ಕಳ ಪ್ರಶ್ನೆಯನ್ನು ಸಂವಿಧಾನಿಕ ಜವಾಬ್ದಾರಿಯಾಗಿ ಪರಿಗಣಿಸಿ, ಸಮಗ್ರ ಮತ್ತು ಜವಾಬ್ದಾರಿಯುತ ಆಡಳಿತ ವ್ಯವಸ್ಥೆ ನಿರ್ಮಿಸುವುದು ಅಗತ್ಯವಾಗಿದೆ.

## ಪರಾಮರ್ಶನ ಗ್ರಂಥಗಳು:


1. Aptekar, L., & Stoecklin, D. (2014). Street children and homeless youth. Springer.
2. Bhattacharjee, N., & Narayan, S. (2024). From shelter to the streets: The feminine face of homelessness in contemporary democracies. The International Journal of Human Rights. https://doi.org/10.1080/13642987.2024.2327374
3. Goel, K., Tarique, M., & Anand, M. (2024). Homelessness in India: A state legislative and civil society perspective. Routledge.
4. Gurung, H. (2004). Study of policies and programmes addressing the right of street children to education. UNESCO.
5. Ipe, R. (2021). Navigating school development and children's rights governance in resource-poor contexts in Karnataka, India (Doctoral dissertation, University of Glasgow). https://theses.gla.ac.uk/82329/
6. Ipe, R. (2021). Navigating school development and children's rights governance in resource-poor contexts in Karnataka, India (Doctoral dissertation, University of Glasgow).
7. Jayaraj, K. P. (2025). 'Street children' in India: A new framework for research. Indian Journal of Human Development.
8. Kadekodi, G. K. (2017). Inclusive development: A paradigmic analysis for Karnataka. Centre for Multi-Disciplinary Development Research.
9. Maria, A. (2022). Access to education of street children in Bangalore city: A study of two non-governmental organisations.
10. Nanjunda, D. C., & Lakshmi, S. J. (2024). Children of female sex workers: A study of situation and vulnerability in Karnataka. Artha Journal of Social Sciences.
11. Panter-Brick, C. (2002). Street children, human rights, and public health: A critique and future directions. Annual Review of Anthropology, 31, 147–171.
12. Rai, P., & Shekhar, C. (2025). Street children in India: Policy analysis, successes, failures, and recommendations for reform.
13. Ramaswamy, S., Ashok, S., & Seshadri, S. (2022). Mental health issues and challenges of children in Karnataka. Fiscal Policy Institute.
14. Rao, M. B. V., Prasad, S. R., & UC, A. (2024). Does child-friendly Gram Panchayats mean good governance? An analysis of 10 Gram Panchayats in Karnataka. Journal of Development Policy and Practice. https://doi.org/10.1177/24551333231203774
15. Savarkar, T., & Das, S. (2019). Mental health problems among street children: The case of India. Current Research Journal of Social Sciences and Humanities.
16. Shankar, B. G. (2018). Runaway missing children in Karnataka state: Causes and intervention strategies. Kuvempu University.
17. Shekhar, C., & Rai, P. (2025). Voiceless and vulnerable: Legal protections, challenges,

and pathways for India's street children. SSRN. https://papers.ssrn.com/sol3/papers.cfm?abstract_id=5180144

18. Shekhar, C., & Rai, P. (2025). Voiceless and vulnerable: Legal protections, challenges, and pathways for India's street children. SSRN.
19. Veparala, A. P. (2019). Bringing mental health care closer to home: Understanding and improving continuity of care for homeless women with severe mental disorders in (South) India (Doctoral dissertation, Vrije Universiteit Amsterdam).
20. Walters, V. (2014). Urban homelessness and the right to water and sanitation: Experiences from India's cities. Water Policy, 16(4), 755–772.
21. ತಿಪ್ಪೇಸ್ವಾಮಿ, ಎಚ್ (2017). ಬಾಲಕಾರ್ಮಿಕರ ಸಮಸ್ಯೆಗಳು, ಅನ್ನದಾನಿ ಭೈರವ ಪ್ರಕಾಶನ, ಬೆಂಗಳೂರು. ಪು.25–28.
22. ಮೂಲ: ಮಾಂತೆಸೊರಿ, ಮರಿಯಾ. ಅನುವಾದ: ಶಿವರಾಮಕೃಷ್ಣನ್ ಮೀನಾಕ್ಷಿ ಮತ್ತು ಇತರರು. (2006). ಶೈಶವ ಗುಪ್ತ ಚೈತನ್ಯದ ಅದ್ಭುತ. ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು. ಪು 216–218.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.